Vol 7 Issue 3 Dec 2017

ISSN No : 2249-894X

Monthly Multidisciplinary Research Journal

# Review Of Research Journal

Chief Editors

**Ashok Yakkaldevi**
**A R Burla College, India**

Ecaterina Patrascu
Spiru Haret University, Bucharest

Kamani Perera
Regional Centre For Strategic Studies,
Sri Lanka

Welcome to Review Of Research

RNI MAHMUL/2011/38595 ISSN No.2249-894X

Review Of Research Journal is a multidisciplinary research journal, published monthly in English, Hindi & Marathi Language. All research papers submitted to the journal will be double - blind peer reviewed referred by members of the editorial Board readers will include investigator in universities, research institutes government and industry with research interest in the general subjects.

**Regional Editor**

Dr. T. Manichander

Sanjeev Kumar Mishra

***Advisory Board***

Kamani Perera
Regional Centre For Strategic Studies, Sri Lanka

Ecaterina Patrascu
Spiru Haret University, Bucharest

Fabricio Moraes de AlmeidaFederal University of Rondonia, Brazil

Anna Maria Constantinovici
AL. I. Cuza University, Romania

Romona Mihaila
Spiru Haret University, Romania

Delia Serbescu
Spiru Haret University, Bucharest, Romania

Xiaohua Yang
University of San Francisco, San Francisco

Karina Xavier
Massachusetts Institute of Technology (MIT), USA

May Hongmei Gao
Kennesaw State University, USA

Marc Fetscherin
Rollins College, USA

Liu Chen
Beijing Foreign Studies University, China

Mabel Miao
Center for China and Globalization, China

Ruth Wolf
University Walla, Israel

Jie Hao
University of Sydney, Australia

Pei-Shan Kao Andrea
University of Essex, United Kingdom

Loredana Bosca
Spiru Haret University, Romania

Ilie Pintea
Spiru Haret University, Romania

Mahdi Moharrampour
Islamic Azad University buinzahra Branch, Qazvin, Iran

Titus Pop
PhD, Partium Christian University, Oradea,
Romania

J. K. VIJAYAKUMAR
King Abdullah University of Science & Technology,Saudi Arabia.

George - Calin SERITAN
Postdoctoral Researcher
Faculty of Philosophy and Socio-Political Sciences
Al. I. Cuza University, Iasi

REZA KAFIPOUR
Shiraz University of Medical Sciences
Shiraz, Iran

Rajendra Shendge
Director, B.C.U.D. Solapur University, Solapur

Awadhesh Kumar Shirotriya

Nimita Khanna
Director, Isara Institute of Management, New Delhi

Salve R. N.
Department of Sociology, Shivaji University, Kolhapur

P. Malyadri
Government Degree College, Tandur, A.P.

S. D. Sindkhedkar
PSGVP Mandal's Arts, Science and Commerce College, Shahada [ M.S. ]

Anurag Misra
DBS College, Kanpur

C. D. Balaji
Panimalar Engineering College, Chennai

Bhavana vivek patole
PhD, Elphinstone college mumbai-32

Awadhesh Kumar Shirotriya
Secretary, Play India Play (Trust),Meerut (U.P.)

Govind P. Shinde
Bharati Vidyapeeth School of Distance Education Center, Navi Mumbai

Sonal Singh
Vikram University, Ujjain

Jayashree Patil-Dake
MBA Department of Badruka College Commerce and Arts Post Graduate Centre (BCCAPGC),Kachiguda, Hyderabad

Maj. Dr. S. Bakhtiar Choudhary
Director,Hyderabad AP India.

AR. SARAVANAKUMARALAGAPPA UNIVERSITY, KARAIKUDI,TN

V.MAHALAKSHMI
Dean, Panimalar Engineering College

S.KANNAN
Ph.D , Annamalai University

Kanwar Dinesh Singh
Dept.English, Government Postgraduate College , solan

More.........

**Address:-Ashok Yakkaldevi 258/34, Raviwar Peth, Solapur - 413 005 Maharashtra, India**
**Cell : 9595 359 435, Ph No: 02172372010 Email: ayisrj@yahoo.in Website: www.oldror.lbp.world**

REVIEW OF RESEARCH
ISSN: 2249-894X
IMPACT FACTOR : 5.2331(UIF)
VOLUME - 7 | ISSUE - 3 | DECEMBER - 2017

# ವಚನ ಸಾಹಿತ್ಯ ಕನ್ನಡದ ವಿಶಿಷ್ಟ ಸಾಹಿತ್ಯ

ಡಾ. ಸುವರ್ಣ ಎಮ್. ಹಿರೇಮಠ
ಕನ್ನಡ ಉಪನ್ಯಾಸಕರು
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ಜೇವರ್ಗಿ ಕಾಲೋನಿ ಕಲಬುರಗಿ.

ವಚನ ಸಾಹಿತ್ಯ ಅನೇಕ ವೈಶಿಷ್ಟ್ಯಗಳಿಂದ ಕೂಡಿರುವ ಸಾಹಿತ್ಯ ಪ್ರಕಾರ. ವಚನಗಳಲ್ಲಿ ಮೇಲೆದ್ದು ಕಾಣುವುದೆಂದರೆ ಅದರ ಮುಕ್ತ ರೂಪ. ಪ್ರತಿ ವಚನಗಳ ಕೊನೆಯಲ್ಲಿ ವಚನಕಾರರ ಅಂಕಿತವಿರುವುದು ವಚನಗಳ ಮತ್ತೊಂದು ವೈಶಿಷ್ಟ್ಯ.

ವಚನವನ್ನು ಆರ್.ನರಸಿಂಹಾಚಾರ್ಯರು ತಾವು ಬರೆದ ಕವಿ ಚರಿತೆ (1907) ಎಂಬ ಗ್ರಂಥದ ಮೊದಲ ಸಂಪುಟದಲ್ಲಿ 'ಸಾಹಿತ್ಯ' ಎಂದು ಗುರುತಿಸಿದ್ದಾರೆ.

ನಂತರ 1915 ರಲ್ಲಿ ಇ.ಪಿ. ರೈಸ್ 'ಕನರೇಸ್ ಲಿಟರೇಚರ್' ಎಂಬ ಗ್ರಂಥದಲ್ಲಿ ವಚನ ಲಿಟ್ರೇಚರ್ ಎಂಬ ಅಧ್ಯಾಯ ಬರೆದು 'ವಚನವನ್ನು ಸಾಹಿತ್ಯ' ಎಂದು ಗುರುತಿಸಿದರು.

ಹೀಗೆ ಸಾಹಿತ್ಯ ಎನಿಸಿಕೊಂಡ ವಚನಗಳ ಉದ್ದೇಶ ಕೇವಲ ಸಾಹಿತ್ಯ ಬೆಳವಣಿಗೆಯಲ್ಲ. ಸಮಾಜ ಸುಧಾರಣೆ ಅಂತೆಯೇ ಕುವೆಂಪುರವರು ಬಸವಣ್ಣಾದಿಯಾಗಿ ಯಾರನ್ನು ಸಾಹಿತಿ ಎಂದು ಕರೆಯದೇ ವಚನಕಾರ ಸಮಾಜ ಸುಧಾರಕರೆಂದು ಗುರುತಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಮಾರ್ಗ ಪರಂಪರೆಯಿಂದ ದೇಸಿ ಪರಂಪರೆಗೆ ಬದಲಾಯಿತು. ನವ್ಯ ಸಾಹಿತ್ಯದ ಪರಿಕಲ್ಪನೆಗೆ ವಚನ ಸಾಹಿತ್ಯ ತುಂಬಾ ಹತ್ತಿರವಾಯಿತು.

ಭಕ್ತ ಸ್ಥಲದಲ್ಲಿ ದೈವದ ಸ್ವರೂಪವನ್ನು ಈ ರೀತಿ ಹೇಳಿದ್ದಾರೆ.
ನೀರೊಳಗಿರುವ ಬೆಂಕಿಯ ಹಾಗೆ
ಗಿಡದಲ್ಲಿರುವ ರುಚಿಯ ಹಾಗೆ
ಹೂವಿನಲ್ಲಿರುವ ಪರಿಮಳದ ಹಾಗೆ
ಕನ್ನೆಯ ನಿಗೂಢ ಸ್ನೇಹದಂತೆ ನಿನ್ನ ಭಕ್ತಿ ಅಡಕವಾಗಿದೆ.

### ಭಕ್ತಿಯ ಮಹತ್ವ ಹೇಳುವ ವಚನ.–

ಆನೆ ದೊಡ್ಡದು ಆದರೆ ಅಂಕುಶವನ್ನು ಚಿಕ್ಕದೆನ್ನಬಹುದೆ?
ಕತ್ತಲು ದೊಡ್ಡದು ಆದರೆ ಜ್ಯೋತಿ ಚಿಕ್ಕದೆನ್ನಬಹುದೆ?
ಪರ್ವತ ದೊಡ್ಡದು ಆದರೆ ಕತ್ತರಿಸುವ ವಜ್ರ ಚಿಕ್ಕದೆನ್ನಬಹುದೆ?

ಹೀಗೆ 'ಪ್ರಾರ್ಥನೆ ಮಾಡುವ ಮನಸ್ಸು ಚಿಕ್ಕದಾದರೂ ಅದರಲ್ಲಿರುವ ಭಕ್ತಿ ದೊಡ್ಡದು' ಎಂದು ಹೇಳಲು ಅನೇಕ ರೂಪಕಗಳನ್ನು ನೀಡಿದ್ದಾರೆ.




'ಹರ ಕೊಲ್ಲರ್ ಪರ ಕಾಯ್ವನೆ' ಎಂಬಂತೆ ದೈವ ಬೆಂಬಲದಿಂದ ಮಾತ್ರ ತಾನು ಈ ಸ್ಥಿತಿಯಿಂದ ಪಾರಾಗಬಹುದು. ಕತ್ತಿಗೆ ತುಪ್ಪವನ್ನು ಸವರಿದೆ ಎಂದು ತುಪ್ಪವನ್ನು ನೆಕ್ಕಲು ಹೋದರೆ ಬದುಕೇ ನಾಶವಾಗುತ್ತದೆ. ಅದು ಗೊತ್ತಿದ್ದರೂ ಅಪಾಯದ ಸೂಚನೆ ಇದ್ದರೂ ಆಕರ್ಷಣೆಗೆ ಒಳಗಾಗುತ್ತದೆ.

### ಸಾಮಾಜಿಕ ವಿಡಂಬನೆ:–

ಶ್ರೀಮಂತರ ವಿರುದ್ಧ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ವಚನಕಾರರದಾಗಿತ್ತು. ವರ್ಣ ಮತ್ತು ವರ್ಗ ಸಂಘರ್ಷದ ಅರಿವಿತ್ತು.

ಹಾವು ಕಡಿದವರನ್ನು ಬದುಕಿಸಬಹುದು
ಹುಚ್ಚು ಹಿಡಿದವರನ್ನು ಸರಿಪಡಿಸಬಹುದು
ಶ್ರೀಮಂತಿಕೆ ಮದವಿದ್ದರೆ ಅದನ್ನು ಇಳಿಸಲು ಸಾಧ್ಯವಿಲ್ಲ.
ಏನು ಬಂದಿರಿ ಹದುಳವಿದ್ದಿರೆ? ಎಂದರೆ

ನಿಮ್ಮ ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ?
ಈ ವಚನದಲ್ಲಿ ಆಡು ಮಾತು ಹೇಗೆ ಮೊನಚಾದ ವ್ಯಂಗ್ಯವಾಗಿದೆಂಬುದನ್ನು ಗಮನಿಸಬೇಕು.

ವಚನಗಳು ನೇರವಾಗಿ ಹೃದಯದಿಂದ ಬಂದ ಭಾವನೆಗಳು. ಈ ದೃಷ್ಟಿಯಿಂದ ನೋಡಿದಾಗ ಡಿ.ಎಲ್. ನರಸಿಂಹಾಚಾರ್ಯರು ವಚನಗಳನ್ನು "ಶಿವಶರಣರ ಹೃದಯ ವಿದ್ರಾವಕ ಗೀತೆಗಳೆಂದು" ಕರೆದಿರುವುದು ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

'ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ'

ಕೇವಲ ಸೊಗಿನ ತತ್ವಗಳಿಂದ ಪರಿಸ್ಥಿತಿಯನ್ನು ಸುಧಾರಿಸಲಾಗದು ಎಂಬ ನಂಬಿಕೆಯಿಂದ ಬಸವಣ್ಣನವರು ಸುತ್ತಲಿನ ಲೋಕ ಜೀವನದಲ್ಲಿ ಕಾಣುವ ಕೊಳಕು ಡಾಂಭಿಕತೆಗಳನ್ನು ವಿಡಂಬಿಸಿದ್ದಾರೆ.

ಬರು ಸೆಟುಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯ್ತು

ನಿಜಾಂತರಂಗದಲ್ಲಿ ಭಕ್ತಿಯಿಲ್ಲದೆ ಭಕ್ತನಂತೆ ಸೋಗು ಹಾಕುವವನ ನಡುವಳಿಕೆಯು ಜನರೊಳಗೆ ಸಭ್ಯನೆಂಬ ಭ್ರಮೆಯನ್ನುಂಟು ಮಾಡಬಹುದಾದರೂ ತಕ್ಕ ಕಾಲದಲ್ಲಿ ಈ ಠಕ್ಕುತನವು ಬಯಲಿಗೆ ಬರುವುದೆಂಬುದನ್ನು ದಾಸಿಮಯ್ಯನು ಸಂಕ್ಷೀಪ್ತವಾದರೂ ಶಕ್ತಿಯುತವಾದ ರೀತಿಯಲ್ಲಿ ಚಿತ್ರಿಸಿದ್ದಾನೆ.

'ಕಲ್ಲನಾಗರ ಕಂಡರೆ, ಹಾಲನೆರೆಯೆಂಬರು
ದಿಟದ ನಾಗರ ಕಂಡರೆ, ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದರೆ ನಡೆಯೆಂಬರು
ಉಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ
ಎಂಬ ಮಾತುಗಳಲ್ಲಿ ಬಸವಣ್ಣನು ಜನರ ನಡುವಳಿಕೆಯ ವಿರೋಧ ಸೂಚಿಸುತ್ತಾನೆ.
'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮನೊಲಿಸುವ ಪರಿ'

ಎಂಬಂತಹ ಘಟನೆಗಳಲ್ಲಿ ಶಿವಶರಣರು ತುಂಬಾ ನೇರವೂ ಸರಳವೂ ಪರಿಭಾಷಾರಹಿತವೂ ಆದ ಶೈಲಿಯನ್ನು ಜನರು ಅನುಸರಿಸಬೇಕಾದ ಜೀವನ ಮಾರ್ಗವನ್ನು ಬೋಧಿಸಿದರು.

'ದಯವಿಲ್ಲದ ಧರ್ಮವದಾವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯ'
ಈ ಪ್ರಸಿದ್ಧ ವಚನವಂತೂ ಜನತಾ ಧರ್ಮದ ಆಶಯವನ್ನು ಸುಂದರವಾಗಿ ಪಡಿಮೂಡಿಸುತ್ತದೆ.
ಆಚಾರವೇ ಸ್ವರ್ಗ ಅನಾಚಾರವೇ ನರಕ
ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ
ಕಾಯಕವೇ ಕೈಲಾಸ
ಇಲ್ಲಿ ಸಲುಹುವರು ಅಲ್ಲಿಯೂ ಸಲ್ಲುವರಯ್ಯ

ಎಂಬಂತಹ ಸೂತ್ರಬದ್ಧ ಮಾತುಗಳ ಮೂಲಕವಾಗಿ ಶರಣರು ನಡತೆಯ ರೀತಿಯಲ್ಲಿ ಬೋಧಿಸಿದರು. ಇವು ಇಂದಿಗೂ ನಾಣ್ಣುಡಿಗಳಂತೆ ಬಳಕೆಗೊಳ್ಳುತ್ತಿರುವುದು. ಶರಣರ ಮಾತುಗಳು ಆ ಕಾಲದಲ್ಲಿ ಹೇಗೆ ಜನಮನವನ್ನು ತಲುಪಿದವೆಂಬುದಕ್ಕೆ ಸಾಕ್ಷಿಯಾಗಿದೆ.

ವಚನಗಳಲ್ಲಿ ಕಾವ್ಯಗುಣ

ವಚನಕಾರರು ವಚನಗಳಲ್ಲಿ ಸಂಕ್ಷೀಪ್ತತೆಯನ್ನು ಸಾಧಿಸಿ ಪರಿಣಾಮವನ್ನು ಮೊನಚುಗೊಳಿಸುವ ರೀತಿಯಂತೂ ಕೆಲವೊಮ್ಮೆ ಆಶ್ಚರ್ಯಕರವಾದದ್ದು. ಕಿರಿದರಲ್ಲಿ ಪಿರಿದನ್ನು ಅಡಗಿಸುವ ಕಲೆಗಾರಿಕೆಯಾಗಿದೆ.

ಹರಿದ ಗೋಣಿಯಲ್ಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ

ಸತಿ–ಪತಿಭಾವದ ಕೆಲವು ವಚನಗಳಲ್ಲಿ ಆಧ್ಯಾತ್ಮ ಶೃಂಗಾರದ ತುಂಬಾ ಸುಂದರವಾದ ಗೀತೆಗಳನ್ನು ಕಾಣುತ್ತೇವೆ. ಉರಲಿಂಗದೇವ ಮತ್ತು ಮಹಾದೇವಿಯಕ್ಕ ಇವರುಗಳು ಹೆಚ್ಚು ಸಂಖ್ಯೆಯಲ್ಲಿ ಇಂತಹ ವಚನಗಳನ್ನು ರಚಿಸಿದ್ದಾರೆ.

ಕಾಣುತ್ತಾ ಕಾಣುತ್ತಾ ಕಂಗಳ ಮುಚ್ಚಿದೆ ನೋಡವ್ವಾ
ಕೇಳುತ್ತಾ ಕೇಳುತ್ತಾ ಮೈಮನದೂಗಿದೆ ನೋಡವ್ವಾ
ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ

ದೈಹಿಕವಾದ ನೋವುಗಳನ್ನು ಹೇಳಿ ಆ ದೇಹಬಾದೆಗಳಿಲ್ಲದಿದ್ದರೂ ತಾನು ಅನುಭವಿಸುತ್ತಿರುವ ಮಾನಸಿಕ ವ್ಯಥೆಯ ಸ್ವರೂಪವನ್ನು ಇಲ್ಲಿ ವಚನಕಾರ್ತಿ ಚಿತ್ರಿಸುತ್ತಾಳೆ.

**ವಚನಗಳಲ್ಲಿ ದೃಷ್ಟಾಂತ**

ದೃಷ್ಟಾಂತ, ಉಪಮೆ, ರೂಪಕಗಳು, ಶಬ್ದಚಿತ್ರಗಳು, ಇವುಗಳ ಬಸವಣ್ಣನವರ ವಚನಗಳಲ್ಲಿ ತುಂಬಿ ತುಳುಕುತ್ತಿವೆ. ಧರ್ಮ ಪ್ರಚಾರದ ಉತ್ಸಾಹ, ಜನ ಸುಧಾರಿಸಬೇಕೆಂಬ ಹಂಬಲ, ಜೀವ ತನ್ನ ಕೊಳೆಯನ್ನು ಕಳೆದುಕೊಂಡು ಶುದ್ಧ ಅಪರಂಜಿಯಾಗಬೇಕೆಂಬ ಕಾತರ, ಇವೇ ಅವರ ಸಾಹಿತ್ಯಕ್ಕೆ ಪ್ರೇರಣೆ. ಆದರೆ ಕವಿಯಾಗಿ ಕೀರ್ತಿ– ಗೌರವಗಳನ್ನು ಗಳಿಸಬೇಕೆಂಬ ಬಯಕೆ ಅವರಿಗಿರಲಿಲ್ಲ.

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಮಡಕೆಯ ಮಾಡುವರೆ ಮಣ್ಣೇ ಮೊದಲು
ತೊಡುಗೆಯ ಮಾಡುವರೆ ಹೊನ್ನೇ ಮೊದಲು

ಇಂತಹ ವಚನಗಳಲ್ಲಿ ಲೋಕಪ್ರಿಯ ದೃಷ್ಟಾಂತಗಳನ್ನು ಬಳಸಿ ಅತ್ಯಂತ ಸರಳವಾಗಿ ಹಾಗೂ ಪ್ರಾಮಾಣಿಕವಾಗಿ ಭಗವಂತನ ಬಗೆಗಿನ ತಮ್ಮ ಹಂಬಲವನ್ನು ತೋಡಿಕೊಂಡಿದ್ದಾರೆ.

ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು ಜೇನು ತುಪ್ಪವ ಹೊಯ್ದಡೆ
ಎನಿಸು ಕಾಲ ಕಲ್ಲು ನೀರೊಳಗಿರ್ದರೇನು?
ನೆನೆದು ಮೃದುವಾಗಬಲ್ಲುದೆ?

ಹೀಗೆ ಒಂದಾದ ಮೇಲೊಂದರಂತೆ ದೃಷ್ಟಾಂತ ಮಾಲಿಕೆಯನ್ನು ಬಳಸಿ, ಹುಟ್ಟುಗುಣ, ಏನು ಮಾಡಿದರೂ ಹೋಗದು ಎಂಬುದನ್ನು ಹೇಳುವಾಗ ಕಣ್ಣೆದುರು ಒಂದು ಚಿತ್ರವನ್ನು ನಿಲ್ಲಿಸುವ, ಆಡಿದ ಮಾತನ್ನು ಮನಕ್ಕೆ ಮುಟ್ಟಿಸುವ, ಅರ್ಥ ಔಚಿತ್ಯಪೂರ್ಣವಾಗಿ ಬಿಂಬಿಸಿದೆ.

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ –ಎನ್ನುವಲ್ಲಿ ವ್ಯರ್ಥ ಭಕ್ತಿ.
ಕಂಬಳಿಯಲ್ಲಿ ಕಣಕವ ನಾದಿದಂತೆ –ಎನ್ನುವಲ್ಲಿ ಸಂಸಾರದ ಭಯಂಕರತೆ ನಶ್ವರತೆ,
ಕಪ್ಪೆ ಸರ್ಪದ ನೆರಳಿನಲ್ಲಿಪ್ಪಂತೆ
ಆಲಿ ಕಲ್ಲ ಹರಳಿನಂತೆ, ಅರಗಿನ ಪುತ್ತಳಿಯಂತೆ

ಎನ್ನುವಲ್ಲಿ ಇಲ್ಲೆಲ್ಲಾ ಮಿಂಚಿರುವ ಬಸವಣ್ಣನವರ ಉಪಮಾಲೋಕ ಒಂದು ಅದ್ಭುತ ಸೃಷ್ಟಿ. ಇವರ ಮತ್ತೊಂದು ಗುಣ ಅವರ 'ರೂಪಕ' ವೈಭವ.

ಕನ್ನಡ ಸಾಹಿತ್ಯದಲ್ಲಿ ನಾರಣಪ್ಪ, ಬಸವಣ್ಣ, ಇವರಿಬ್ಬರ ಹಾಗೆ ಭಾಷೆಯ ಸಾಧ್ಯತೆ ಸೂರೆ ಮಾಡಿದವರು ಹಾಗೂ ರೂಪಕ ನಿರ್ಮಾಣ ಮಾಡಿದವರು ವಿರಳವೆಂದೇ ಹೇಳಬೇಕು.

**ನಿದರ್ಶನಕ್ಕೆ –** ಮರ್ತ್ಯ ಲೋಕವೆಂಬುದು ಕರ್ತಾರಕನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ
ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯ
ಅಂದಣವನ್ನೇರಿದ ಸೊಣಗ
ಒಂದು ಮೊಲಕ್ಕೆ ನಾಯಿನೊಂಬತ್ತು ಬಿಟ್ಟಂತೆ
ಮರವನೇರಿದ ಮರ್ಕಟದಂತೆ
ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ ಮನವೆ॥

ಈ ಮಹೋಪಮೆಯಲ್ಲಿನ ವಿವಿಧ ಪ್ರಾಣಿ ಚಿತ್ರಗಳ ಮೂಲಕ ಯಶಸ್ವಿಯಾಗಿ ಚಿತ್ರಿಸಿದ್ದಾರೆ. ಹಾಗೆಯೇ ಇವರು ಪ್ರಾಣಿ ಪ್ರಪಂಚದಿಂದಲೂ ಸಾಕಷ್ಟು ರೂಪಕಗಳನ್ನು ನಿರ್ಮಿಸುತ್ತಾರೆ. ಒಂದೇ ಪ್ರಾಣಿ ರೂಪಕವನ್ನು, ವಿವಿಧಾರ್ಥಗಳಲ್ಲಿ ದುಡಿಸಿಕೊಳ್ಳಲು ಬಳಸಿರುವುದು ಮುಖ್ಯ ಸಂಗತಿ.

• ವಿಷಯವೆಂಬ ಹಸುವನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ

• ಕೆಸರಲ್ಲಿ ಬಿದ್ದ ಪಶುವಿನಂತೆ

• ಓತ ಬೇಲಿವರಿದಂತೆ ಎನ್ನ ಮನವಯ್ಯಾ

ಒಟ್ಟಿನಲ್ಲಿ ಅವರ ವಚನಗಳು ಬರೀ ನಟನೆಯಲ್ಲ. ಅವು ಅಂತರಂಗದ ಸ್ಫುರಿತ ನೈಸರ್ಗಿಕ ಭಾವಗಳು, ಬಸವಣ್ಣನವರ ಆತ್ಮವೃತ್ತವು ಪ್ರಬಲವಾದೊಂದು ಮನೋಯುದ್ಧದ ಚರಿತ್ರೆಯಾಗಿರುತ್ತದೆ ಎನ್ನುವ ಎಂ.ಆರ್. ಶ್ರೀನಿವಾಸಮೂರ್ತಿಗಳ ಅಭಿಪ್ರಾಯ ಉಚಿತವಾಗಿದೆ.

ಬಸವಣ್ಣನವರ ವಚನಗಳಲ್ಲಿ ಶಬ್ದ ಚಿತ್ರಗಳು ವಿಫುಲ. ನಾಲ್ಕಾರು ಮಾತುಗಳಲ್ಲಿಯೇ ಒಂದು ಚಿತ್ರವನ್ನು ಕಣ್ಣಮುಂದೆ ಕಡೆದು ನಿಲ್ಲಿಸುತ್ತಾರೆ. ಇಲ್ಲಿ ಶರಣರ ಬರುವಿಗಾಗಿ ಕಾದುಕುಳಿತ ಜೀವಸತಿಯ ಚಿತ್ರ ಅದ್ಭುತ ರಮ್ಯವಾಗಿದೆ.

'ನೆರೆ ಕೆನ್ನೆಗೆ ತೆರೆಗಲ್ಲಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ'

ಇಲ್ಲಿನ ಒಂದೊಂದು ಸಾಲು ಹಂತ ಹಂತವಾಗಿ ಕಟ್ಟಿಕೊಡುವ ಮುಪ್ಪಿನ ಚಿತ್ರ ಒಂದು ದೃಶ್ಯವನ್ನು ಭಾವಭಿನಯ ಮಾಡಿ ತೋರಿಸುವಷ್ಟು ಜೀವಂತವಾಗಿದೆ. ಇವು ಅವರ ವಚನಗಳ ಸಾಲು ಸಾಲಿನಲ್ಲಿಯೂ ಪ್ರತ್ಯೇಕ್ಷವಾಗಿರುತ್ತದೆ.

ಉಪಮೆ ರೂಪಕಗಳನ್ನು ವಿಫುಲವಾಗಿ ಅಲ್ಲದಿದ್ದರೂ, ಅಲ್ಲಲ್ಲಿ ಕ್ವಚಿತ್ತಾಗಿ ಕಾಣಿಸಿಗುವ ಪ್ರತಿಮೆಗಳು ಬಸವಣ್ಣನವರಲ್ಲಿ ಅತ್ಯಂತ ಧ್ವನಿಪೂರ್ಣವಾಗಿದೆ.

**ಉದಾ:–** ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜ ತುಂಬಿ

ಬದುಕಿನಲ್ಲಿ ರಿಕ್ತಾವಸ್ಥೆಗೆ ಒಡ್ಡಿದ ಈ ಪ್ರತಿಮೆಯಲ್ಲಿ 'ಇದ್ದಾನೋ ಇಲ್ಲವೋ' ಎಂಬ ಅನುಮಾನದಿಂದ ಪ್ರಾರಂಭವಾಗಿ 'ಇಲ್ಲ' ಎಂಬ ನಿರ್ದಿಷ್ಟತೆಯಲ್ಲಿ ಕೊನೆಯಾಗುತ್ತದೆ. ಹುಲ್ಲು– ಹುಸಿಯಾಗುತ್ತದೆ. ರಜ– ವಿಷಯವಾಗುತ್ತದೆ.

ಈ ಪ್ರತಿಮಾ ಶಿಲ್ಪ ಕವಿ ಮತ್ತು ಧಾರ್ಮಿಕ ಸುಧಾರಕ ಇವರಿಬ್ಬರ ದ್ವಂದ್ವವನ್ನು ಪ್ರತಿನಿಧಿಸುತ್ತದೆ. ವ್ಯವಹಾರಕ್ಕೆ ಸಂಬಂಧಪಟ್ಟ ಇನ್ನೊಂದು ಪ್ರತಿಮೆ, ವ್ಯಾಪಾರಕ್ಕೆ ಕೂತ ಹರನದು.

'ಧರಣಿಯ, ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ'

ಇಲ್ಲಿ ಪ್ರಪಂಚವೇ ಅಂಗಡಿ, ಕೂಡಲಸಂಗಮನೇ ವ್ಯಾಪಾರಿ. ಆತನ ಜಾಣತನ ಲೆಕ್ಕಾಚಾರಗಳನ್ನು ನೋಡಿ ಬೆರಗಾಗಿದ್ದಾರೆ. ಬಸವಣ್ಣ ಆತನ ಕಾಣಿಯಗೆಲ್ಲ, ಕಾಣಿಯ ಸೋಲ, ಇಮ್ಮನವಾದರೆ ಇಲ್ಲಿ ವ್ಯವಹಾರವೇ ಇಲ್ಲ ಇದರಲ್ಲಿ ಸಂಗಮನಾಥನ ಬಗೆಗಿರುವ ಅಚ್ಚರಿ ಆತ್ಮೀಯತೆಗಳೆರಡನ್ನು ಏಕಕಾಲಕ್ಕೆ ಸ್ಪುರಿಸುವ ಸತ್ವಪೂರ್ಣ ಪ್ರತಿಮೆಯಾಗಿದೆ ಇದು.

ವಚನಗಳ ಶೈಲಿ

ವ್ಯಕ್ತಿ ವಿಶಿಷ್ಟಾಭಿವ್ಯಕ್ತಿಯೇ ಶೈಲಿ. ಈ ದೃಷ್ಟಿಯಿಂದ ನೋಡಿದರೆ ಬಸವಣ್ಣವರಲ್ಲಿ 'ಅನುಭವವೂ ವಿಶಿಷ್ಟ. ಅಭಿವ್ಯಕ್ತಿಯೂ ವಿಶಿಷ್ಟ,' ಏಕೆಂದರೆ ಬಸವಣ್ಣ ತಮಗೆ ಹಿನ್ನೆಲೆಯಾಗಿದ್ದ, ಆಗಲೇ ಸಿದ್ದವಾಗಿದ್ದ ಚಂಪೂ ಶೈಲಿಯನ್ನಾಗಲಿ, ಆ ಪರಂಪರೆಯ ಕಥಾವಸ್ತು ಕ್ರಮಗಳನ್ನಾಗಲಿ ಅನುಸರಿಸದೆ ತಮ್ಮದೇ ಆದ ಹೊಸ ಅಭಿವ್ಯಕ್ತಿಯನ್ನು ರಚಿಸಿಕೊಂಡರು.

ಸರಳತೆ, ಸ್ಪಷ್ಟತೆ, ಸಂಕ್ಷೀಪ್ತತೆ ಮತ್ತು ಚಿತ್ರಕತೆ ಇವು ಅವರ ಶೈಲಿಯ ಮುಖ್ಯ ಲಕ್ಷಣಗಳು. ಜನಸಾಮಾನ್ಯರನ್ನು ಗುರಿಯಾಗಿಟ್ಟುಕೊಂಡ ಅವರು ಸುತ್ತಮುತ್ತಣ ಜನರು ಆಡುತ್ತಿದ್ದ ಅಚ್ಚಗನ್ನಡ ನುಡಿಯನ್ನು,

ಉದಾ;–

- ಕಳಬೇಡ ಕೊಲಬೇಡ, ಹುಸಿಯ ನುಡಿಯಲುಬೇಡ
- ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ
- ಎನಿಸು ಕಾಲ ಕಲ್ಲು ನೀರೊಳಗಿರ್ದರೇನು! ನೆನೆದು ಮೃದುವಾಗಬಲ್ಲುದೆ?

ವಚನಗಳಲ್ಲಿ ಸಂಸ್ಕೃತ ಬಳಕೆ ತೀರ ವಿರಳವಾದರೂ, ಸಂಸ್ಕೃತ ಹಾಗೂ ಕನ್ನಡದ ಬೆರಕೆ ಹಿತಮಿತವಾಗಿ ಹದವಾಗಿದೆ.

ಉದಾ:–

- ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟದ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?
- ಭವಬಂಧನ ಭವಪಾಶವಾದ ಕಾರಣವೇನಯ್ಯಾ

ಗಾದೆ ಮಾತುಗಳು ಹಾಗೂ ಸೂಕ್ತಿ ಸಾದೃಶ್ಯವಾದ ನುಡಿ–ಮುತ್ತುಗಳಿಂದ ಅವರ ಕಾವ್ಯ ಮತ್ತಷ್ಟು ಸೊಗಸು ಪಡೆದಿದೆ.

ಉದಾ:–

ಬಳ್ಳಿಗೆ ಕಾಯಿ ದಿಮ್ಮಿತ್ತೆ
ಅಧರಕ್ಕೆ ಕಹಿ ಉದರಕ್ಕೆ ಸಿಹಿ
ಊರ ಸೀರೆಗೆ ಅಗಸ ತಡಬಡಿ ಹೆಡೆದಂತೆ
ಬಡವನ ಕೋಪ ದವಡೆಗೆ ಮೃತ್ಯುವಾದಂತೆ
ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು

ಹೀಗೆ ಕಿರಿದರಲ್ಲಿ ಹಿರಿದಾದ ಅರ್ಥ ಒಳಗೊಂಡ ಜಾಣತನ ಈ ವಚನಗಳಲ್ಲಿ ಕಾಣುತ್ತೇವೆ. ಮಾರ್ದವತೆ ವಚನ ಶೈಲಿಯ ಮತ್ತೊಂದು ಲಕ್ಷಣ.

- ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನನಹುದಯ್ಯ
- ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದೊಡೆ ನಿಲ್ಲಬಹುದೆ.
- ದೇವಲೋಕ ಮೃತ್ಯು ಲೋಕ ಬೇರಿಲ್ಲ ಕಾಣಿರೋ

ಎಂದು ಉಪದೇಶ ಮಾಡುವಾಗ ಬಸವಣ್ಣನ ವಚನಗಳಲ್ಲಿ ಕಾಣುವ ಮಾರ್ಧವತೆ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.
ಈ ಮೃದು ಶೈಲಿ ಕೂಡ ಸಮಾಜವನ್ನು ಟಿಕೀಸುವಾಗ ಕೆರಳುತ್ತದೆ, ತೀಕ್ಷ್ಣವಾಗುತ್ತದೆ.

ಉದಾ:–

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
ಮರಣವೇ ಮಹಾನವಮಿ
ಅತ್ತಲಿತ್ತ ಹೋಗದಂತೆ ಹೇಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ

ಅವರ ವಚನಗಳಲ್ಲಿ ಕಂಡುಬರುವ ಲಯ– ಒಳಪ್ರಾಸ ಅನುಪ್ರಾಸ ಅವರ ಅಭಿವ್ಯಕ್ತಿಗೆ, ವಿಶಿಷ್ಟ ಗೇಯತೆಯನ್ನು ನೀಡಿದೆ.

ಮಾತು ಮಾತಿನ ರೀತಿ ಹೇಗಿರಬೇಕೆಂಬುದನ್ನು ಒಂದೆಡೆ ಹೀಗೆ ಹೇಳುತ್ತಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.

ತತ್ವ ಪ್ರತಿಪಾದನೆಗೆ ಬಸವಣ್ಣ ಬಳಸಿಕೊಂಡ ಪ್ರಕೃತಿ– ಪಶುಪಕ್ಷಿಗಳನ್ನು ರೂಪಕಗಳಾಗಿ, ಉಪಮೆ, ದೃಷ್ಟಾಂತಗಳು ಅವುಗಳಿಗಿರುವ ಸ್ವಭಾವಗಳು ಕ್ಷುಲ್ಲಕತನ, ಮಾನವರಿಗೆ ಬರಬಾರದು ಎಂಬ ಅಭಿಲಾಷೆ ಬಸವಣ್ಣನ ಮಾನವ ಪ್ರೇಮವನ್ನು ಧ್ವನಿಸುತ್ತದೆ.

ಪ್ರಕೃತಿ ಭಕ್ತನ ರೀತಿ ಹೇಗಿರಬೇಕೆಂಬುದನ್ನು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಮಾಡುವ ಭಕ್ತನ ಕಾಯ
ಬಾಳೆಯ ಕಂಬದಂತಿರಬೇಕು
ಮೆಲ್ಲಮೆಲ್ಲನೆ ಹೊರೆಯತ್ತಿ ನೋಡಿದರೆ
ಒಳಗೆ ಕೆಟ್ಟಿಲ್ಲದಿರಬೇಕು
ಮೇಲಾದ ಫಲವ ನಮ್ಮವರು
ಬೀಜ ಸಹಿತ ನುಂಗಿದವರು
ಎನ್ನಗಿನ್ನಾವ ಭಯವಿಲ್ಲ ಕಾಣಾ ಕೂಡಲಸಂಗಮದೇವ.

ಭಕ್ತಿ ಮಾಡುವುದು ಮೆರವಣಿಗೆಗಲ್ಲ, ಸ್ವ ಪ್ರಯೋಜನದಲ್ಲೇ ಮುರುಟಬಾರದು. ಪದಾರ್ಥ ಪರಮಾರ್ಥವಾಗಬೇಕು. ಆದಕಾರಣ ಸಮಾಜದಲ್ಲಿನ ಕಾಮುಕರ ಸ್ಥಿತಿಗತಿಗಳನ್ನು ವಿಶ್ಲೇಷಿಸುತ್ತಾರೆ.

ಶ್ರೀಗಂಧದ– ಮರದ ಬಳಿ ಬೆಳೆದ ಬೇವು–ಬೊಬ್ಬಲಿ –ತುರಿಯ ಮುಂತಾದ ದುರ್ಗಂಧದ ಮರಗಳು ಸುಗಂಧಿಗಳಾಗವು.

ತನ್ನ ಕಹಿಯನ್ನು ಬಿಡದ ಬೇವನ್ನೂ ಕಂಡರೆ ಎಷ್ಟೇ ಬೋಧಿಸಿದರೂ (ವಾದಿಸಿ) ಬುದ್ಧಿಗರಿಯದ ಕೊಂಕನ್ನು ತಿದ್ದಿಕೊಳ್ಳದ ದುಷ್ಟರ ನೆನಪಾಗುತ್ತದೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವ ಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕ ಭಾವಗೀತೆಗಳು. ನಮ್ಮ ಮಾತು ನುಡಿದರೆ ಮುತ್ತಿನ ಹಾರದಂತಿರಬೇಕು ಎಂಬ ಆಶಯವನ್ನಿಟ್ಟುಕೊಂಡು, ಲೋಕವನ್ನು ತಿದ್ದುತ್ತಲೇ ಅನುಪಮವಾದ ಒಂದು ಸಿರಿಯನ್ನು ಸಾಧಿಸಿದರು. ಈ ಲೋಕದಲ್ಲಿಯೇ ಇದ್ದುಕೊಂಡು ಏನೆಲ್ಲವನ್ನು ಸಾಧಿಸಬಹುದೆಂದು ತೋರಿಸಿಕೊಟ್ಟರು. ಲಕ್ಷಾಂತರ ಭಕ್ತರು ಅನುಭವ ಮಂಟಪದಲ್ಲಿ ಸೇರಿ ಚಿಂತನೆ ನಡೆಸುವಂತೆ ಕ್ರಾಂತಿ ಮಾಡಿದ ಶ್ರೇಯಸ್ಸು ವಚನಕ್ಕೂ ಹಾಗೂ ವಚನಕಾರರಿಗೂ ಸಲ್ಲುತ್ತದೆ.

## ಆಕರಗಳು

1) ಜಾಗತಿಕ ಚಿಂತಕರು ಮತ್ತು ಬಸವಣ್ಣ– ಸಂ.ಡಾ.ಹೆಚ್.ಟಿ. ಪೋತೆ.
2) ಬಸವಣ್ಣ – ಸಂ.ಡಾ.ವಿ.ಜಿ. ಪೂಜಾರ.
3) ಭಕ್ತಿ– ಬಂಡಾರಿ ಬಸವಣ್ಣ – ಎಮ್.ಆರ್. ಶ್ರೀನಿವಾಸಮೂರ್ತಿ.
4) ಶಾಸನಗಳಲ್ಲಿ ಶಿವಶರಣರು – ಡಾ. ಎಮ್.ಎಮ್. ಕಲಬುರಗಿ.

# Publish Research Article
# International Level Multidisciplinary Research Journal For All Subjects

Dear Sir/Mam,

We invite unpublished Research Paper,Summary of Research Project,Theses,Books and Books Review for publication,you will be pleased to know that our journals are

## Associated and Indexed,India

- Directory Of Research Journal Indexing
- International Scientific Journal Consortium Scientific
- OPEN J-GATE

## Associated and Indexed,USA

- DOAJ
- EBSCO
- Crossref DOI
- Index Copernicus
- Publication Index
- Academic Journal Database
- Contemporary Research Index
- Academic Paper Databse
- Digital Journals Database
- Current Index to Scholarly Journals
- Elite Scientific Journal Archive
- Directory Of Academic Resources
- Scholar Journal Index
- Recent Science Index
- Scientific Resources Database

Review Of Research Journal
258/34 Raviwar Peth Solapur-
413005,Maharashtra
Contact-9595359435
E-Mail-ayisrj@yahoo.in/ayisrj2011@gmail.com